KARNATAKA LEGISLATURE ASSEMBLY RESEARCH AND REFERENCE BRANCH

PAPER CLIPPINGS

DEPARTMENT / SUBJECT:

NAME OF THE NEWS PAPER:

DATE: 28/1/20

ಆಂಧ್ರ ಪ್ರದೇಶ ವಿಧಾನಸಭೆ ನಿರ್ಣಯ | ಜಿದ್ದಿಗೆ ಬಿದ್ದ ಸಿಎಂ ಜಗನ್‌ಮೋಹನ್ ರೆಡ್ಡಿ

# ಆಂಧ್ರದಲ್ಲಿ ವಿಧಾನ ಪರಿಷತ್‌ಗೆ ತಿಲಾಂಜ...

ವಿ.ಗಾ 28/1/20

**ಅಮರಾವತಿ (ಆಂಧ್ರಪ್ರದೇಶ):** ಆಂಧ್ರ ಪ್ರದೇಶದಲ್ಲಿ ವಿಧಾನ ಪರಿಷತ್ತನ್ನೇ ರದ್ದುಪಡಿಸುವ ಮಹತ್ವದ ಮಸೂದೆಯನ್ನು ಇಲ್ಲಿನ ವಿಧಾನಸಭೆ ಸೋಮವಾರ ಅಂಗೀಕರಿಸಿದೆ.

ಇದರೊಂದಿಗೆ ಮೇಲ್ಮನೆ, ಹಿರಿಯರ ಮನೆ ಎಂದೇ ಖ್ಯಾತವಾಗಿರುವ ವಿಧಾನ ಪರಿಷತ್ ಬರೀ 5 ರಾಜ್ಯಗಳಲ್ಲಿ ಮಾತ್ರ ಉಳಿದುಕೊಂಡಂತಾಗಿದೆ.

**ವಿಧಾನಪರಿಷತ್ ಏಕೆ ಬೇಕು?:** ಕಳೆದ ತಿಂಗಳು ಆಂಧ್ರ ಮೇಲ್ಮನೆ ಕಲಾಪದಲ್ಲಿ ಸಿಎಂ ಜಗನ್ ಮೋಹನ್ ರೆಡ್ಡಿ ಇಂಥದ್ದೊಂದು ಬೆದರಿಕೆಪೂರ್ಣ ಪ್ರಶ್ನೆ ಕೇಳಿದ್ದರು. ಅದುವೇ ಆ ಮನೆಯ ಕೊನೆಯ ಕಲಾಪವಾಗಿಬಿಟ್ಟಿದೆ. ಸೋಮವಾರ ಬೆಳಗ್ಗೆ ವಿಧಾನಪರಿಷತ್ ರದ್ದುಪಡಿಸುವ ನಿರ್ಧಾರವನ್ನು ಸಂಪುಟ ಅಂಗೀಕರಿಸಿದರೆ, ಸಂಜೆ ವಿಧಾನಸಭೆಯಲ್ಲಿ 133–0 ಮತಗಳಲ್ಲಿ ಮಸೂದೆಯನ್ನು ಅಂಗೀಕಾರಗೊಂಡಿದೆ.

## ಕಾರಣ ಏನು?

ಆಂಧ್ರದಲ್ಲಿ ರಾಜಧಾನಿಗಳ ವಿಕೇಂದ್ರೀಕರಣ ಸಹಿತ ಮೂರು ಪ್ರಮುಖ ಮಸೂದೆಗಳು ಕಳೆದ ಕಲಾಪದಲ್ಲಿ ವಿಧಾನಪರಿಷತ್‌ನಲ್ಲಿ ತಿರಸ್ಕೃತಗೊಂಡಿತ್ತು. ರಾಜ್ಯದಲ್ಲಿ ಮೂರು ರಾಜಧಾನಿಗಳನ್ನು ರೂಪಿಸಲು ಜಿದ್ದಿಗೆ ಬಿದ್ದಿರುವ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರ ಪಕ್ಷ ವೈಎಸ್‌ಆರ್ ಕಾಂಗ್ರೆಸ್‌ನ ಸದಸ್ಯ ಬಲ ಕೇವಲ 9 ಇದ್ದಿದ್ದರಿಂದ ಮಸೂದೆ ಪಾಸಾಗಲಿಲ್ಲ, ಎದುರಾಳಿ ತೆಲುಗು ದೇಶಂ ಪಕ್ಷದ ಸದಸ್ಯರ ಸಂಖ್ಯೆ 28. ಇದರಿಂದ ಕೆರಳಿದ ಮುಖ್ಯಮಂತ್ರಿ ಇಡೀ ಮೇಲ್ಮನೆಯನ್ನೇ ರದ್ದುಪಡಿಸಲು ಮುಂದಾದರು. ವರ್ಷಕ್ಕೆ ಮೇಲ್ಮನೆ ನಿರ್ವಹಣೆಗೆ 60 ಕೋಟಿ ವೇಸ್ಟ್ ಎನ್ನುವುದು ಅವರ ವಾದ.



## ಪರಿಷತ್ ರಾಜ್ಯಗಳು

- ಬಿಹಾರ (58 ಸ್ಥಾನಗಳು)
- ಕರ್ನಾಟಕ (75)
- ಮಹಾರಾಷ್ಟ್ರ (78)
- ತೆಲಂಗಾಣ (40)
- ಉತ್ತರಪ್ರದೇಶ (100)

2010ರಲ್ಲಿ ತಮಿಳುನಾಡಿನಲ್ಲಿ ವಿಧಾನ ಪರಿಷತ್ ರದ್ದಾಯಿತು. ಜಮ್ಮುಕಾಶ್ಮೀರದಲ್ಲೂ ಪರಿಷತ್ ಇತ್ತು. ಆದರೆ ಆ ರಾಜ್ಯವನ್ನು 2 ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿಸಿರುವುದರಿಂದ ಅಲ್ಲೂ ಪರಿಷತ್ ರದ್ದಾಗಿದೆ. ರಾಜಸ್ಥಾನ, ಅಸ್ಸಾಂನಲ್ಲಿ ಮೇಲ್ಮನೆ ಸ್ಥಾಪಿಸುವ ಪ್ರಸ್ತಾವ ಇದೆ.

## ಹಿಂದೊಮ್ಮೆ ಇಲ್ಲಿ ರದ್ದಾ...

ವಿಶೇಷವೆಂದರೆ, 1985ರಲ್ಲಿ ಟಿಡಿಪಿ ಮುಖ್ಯಮಂ... ರಾಮರಾವ್ ಅವರು ಮೇಲ್ಮನೆಯನ್ನು ರದ್ದು... ಈಗಿನ ಮುಖ್ಯಮಂತ್ರಿಯವರ ತಂದೆ ವೈ ಎಸ್ ... ರೆಡ್ಡಿ 2007ರಲ್ಲಿ ಮೇಲ್ಮನೆಗೆ ಮತ್ತೆ ಜೀವ ನೀಡಿ...

## ಪರಿಷತ್ ಅಧಿಕಾರವೇನು

ಭಾರತದ ಸಂಸತ್ ವ್ಯವಸ್ಥೆಯಲ್ಲಿ ಮೇಲ್ಮನೆ, ... ಎರಡು ಸದನಗಳಿವೆ. ಕೆಳಮನೆ ನೇರವಾಗಿ ಜನ... ಯಾದ ಸದಸ್ಯರಿರುವ ಸದನ. ಮೇಲ್ಮನೆ ಶಾಸ... ಕ್ಷೇತ್ರಗಳಿಂದ ಆಯ್ಕೆಯಾದ ಶಾಸಕರಿರುವ ಸದನ. ... ಲ್ಲಿರುವ ರಾಜ್ಯಸಭೆಗೆ ಹೆಚ್ಚಿನ ಅಧಿಕಾರವಿದೆ. ಆ... ರಾಜ್ಯಗಳಲ್ಲಿರುವ ವಿಧಾನ ಪರಿಷತ್‌ಗಿಲ್ಲ. ... ನಿರ್ಧಾರಗಳನ್ನು ತಿರಸ್ಕರಿಸುವ ಅಧಿಕಾರ ... ಅಲ್ಲದೇ ಪರಿಷತ್ ಸದಸ್ಯರಿಗೆ, ರಾಷ್ಟ್ರಪತಿ, ... ಚುನಾವಣೆಯಲ್ಲಿ ಮತಹಾಕುವ ಅಧಿಕಾರವಿ...